ಕರ್ನಾಟಕಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರರವರ ನ್ಯಾಯಾಲಯ ನಾಡಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾಕಹೊ/73/2013-14. ದಿನಾಂಕ:19-09-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಪರಸಪ್ಪ ತಂದೆ ಅಲ್ಲೆಪ್ಪರ ಬಸಣ್ಣ<br>2)ಕೆಂಚಪ್ಪ ತಂದೆ ಕೆಂಚಪ್ಪ ಉರುಫ್ ಅಕುಮಪ್ಪ<br>3)ನಾಗರಾಜ ತಂದೆ ಕೆಂಚಪ್ಪ ಉರುಫ್ ಕೆಕ್ಕಪ್ಪ<br>4)ಪರಸಪ್ಪ ತಂದೆ ಕಾಡಪ್ಪ<br>5)ಪರಶುರಾಮಪ್ಪ ತಂದೆ ಕೆಂಗಹೊಸೂರಪ್ಪ<br>6)ಅಲ್ಲೇರ್ ಕಾಡಪ್ಪ ತಂದೆ ಗಂಗಪ್ಪ<br>ಹೊಸಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು | ಮಾರಪ್ಪ ತಂದೆ ಕೆಂಚಪ್ಪ ಉರುಫ್ ಎಕರಪ್ಪ<br>ಹೊಸಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಹೊಸಹಳ್ಳಿ ಗ್ರಾಮದ ಸನಂ 1145. 1187ಎ. ವಿಸ್ತೀರ್ಣ 6-53. 5-71. ಎಕ್ರೆ ಜಮೀನುಗಳನ್ನು ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಹೊಸಹಳ್ಳಿ ಗ್ರಾಮದ ಸನಂ 1145. 1187ಎ. ವಿಸ್ತೀರ್ಣ 6-53. 5-71. ಎಕ್ರೆ ಜಮೀನುಗಳನ್ನು ಸದರಿ ಗ್ರಾಮದ ಪರಸಪ್ಪ ತಂದೆ ಅಲ್ಲೆಪ್ಪರ ಬಸಣ್ಣ ಇವರು ದಿನಾಂಕ 13-05-2010 ರ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಹೊಸಹಳ್ಳಿ ಇವರು ನಮೂನೆ-21 ನೋಟಿಸನ್ನು ದಿನಾಂಕ 18-08-2010 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ಗ್ರಾಮದ ಮಾರಪ್ಪ ತಂದೆ ಕೆಂಚಪ್ಪ ಉರುಫ್ ಎಕರಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣದ ಎಂ.ಆರ್.ನಂಬರ್:24/2010-11. ದಿನಾಂಕ 21-09-2010. ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 19-08-2013 ರಿಂದ 19-09-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಹಾಜರಾಗಿರುತ್ತಾರೆ. ತಕರಾರುದಾರರು ಗೈರು ಹಾಜರಾಗಿರುತ್ತಾರೆ. ಅರ್ಜಿದಾರರ ಪರ ನ್ಯಾಯಾವಾದಿಗಳು ಹೊಸಹಳ್ಳಿ ಗ್ರಾಮದ ಸನಂ 1145. 1187ಎ. ವಿಸ್ತೀರ್ಣ 6-53. 5-71. ಎಕ್ರೆ ಜಮೀನುಗಳು ಅರ್ಜಿದಾರರ ಮುತ್ತಜ್ಜನವರಾದ ತಿಪ್ಪೇಗುಂಡಿ ಕೆಂಚಪ್ಪ ಅಡಿವೆಜ್ಜರ ಕಾಡಪ್ಪ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಸದರಿ ತಿಪ್ಪೇಗುಂಡಿ ಕೆಂಚಪ್ಪ ಇವರು ದಿನಾಂಕ 15-06-1960 ರಂದು ಹಾಗೂ ಇನ್ನೊಬ್ಬ ಮುತ್ತಜ್ಜನವರಾದ ಅಡಿವೆಜ್ಜರ ಕಾಡಪ್ಪ ಇವರು ದಿನಾಂಕ 10-08-1995 ರಂದು ನಿಧನ ಹೊಂದಿರುತ್ತಾರೆ. ಸದರಿ ಜಮೀನುಗಳ ವಾರಸುದಾರರು ಹಾಗೂ ಅರ್ಜಿದಾರರು ದಿನಾಂಕ 13-05-2010 ರಂದು ಪಾಲು ವಿಭಾಗದ ಪತ್ರ ಬರೆಯಿಸಿ ಅದರಂತೆ ಅಳತೆ ಮಾಡಿಸಿ 11ಇ. ನಕ್ಷೆಯನ್ನು ಪಡೆದಿರುತ್ತಾರೆ. ಕಾರಣ ಪೋತಿವಾರಸು ಹಾಗೂ ಪಾಲು ವಿಭಾಗದ ಪತ್ರ ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ಪು.ತಿ.ನೋ-2

ವಿಚಾರಣೆಯಲ್ಲಿ ತಕರಾರುದಾರರು ಗೈರು ಹಾಜರಾಗಿರುತ್ತಾರೆ. ಅವರು ಸದರಿ ವಿವಾದಿತ ಜಮೀನುಗಳ ಪೈಕಿ ಸನಂ 1187ಎಪೈಕಿ. ವಿಸ್ತೀರ್ಣ 2-80 ಎಕ್ರೆ ಜಮೀನನ್ನು ನಮ್ಮ ತಾಯಿಯವರು ಹೆಸರಲ್ಲಿ ಜೀವನಾಂಶಕ್ಕೆ ತೆಗೆದಿದ್ದು ನಮ್ಮ ತಾಯಿ ಮರಣದ ನಂತರ ಮೂವರಿಗೆ ಸದರಿ ಜಮೀನಿನಲ್ಲಿ ಸಮ ಪಾಲು ಬರಬೇಕೆಂದು ಪಾಲು ವಿಭಾಗದ ಪತ್ರದಲ್ಲಿ ನಮೂದಿಸಿರುತ್ತಾರೆ. ಕಾರಣ ಸದರಿ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆಗೆ ತಕರಾರು ಎಂದು ಅರ್ಜಿ ಮಾತ್ರ ಸಲ್ಲಿಸಿದ್ದು ವಿಚಾರಣೆಗೆ ಗೈರು ಹಾಜರಾಗಿರುತ್ತಾರೆ.

ದಿನಾಂಕ 19-09-2016 ರ ವಿಚಾರಣೆಯಲ್ಲಿ ಅರ್ಜಿದಾರರ ಪರ ನ್ಯಾಯಾವಾದಿಗಳು ಹಾಜರಾಗಿದ್ದು ಸದರಿ ಪಾಲು ವಿಭಾಗದ ಪತ್ರದಲ್ಲಿ ತಪ್ಪಾಗಿದ್ದು ಅದರಲ್ಲಿ ಕೆಲವು ಲೋಪದೋಷಗಳು ಇರುವುದರಿಂದ ಹಾಗೂ ಇನ್ನೂ ಕೆಲವು ಆಸ್ತಿಗಳನ್ನು ಬಿಟ್ಟಿರುವುದರಿಂದ ಖಾತಾ ಬದಲಾವಣೆಗೆ ಸಲ್ಲಿಸಿದ ಅರ್ಜಿಯನ್ನು ರದ್ದುಗೋಳಿಸಿ ಪಹಣಿಯನ್ನು ಯಥಾಸ್ಥಿತಿಯಂತೆ ಮಾಡಬೇಕೆಂದು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಪರ ನ್ಯಾಯಾವಾದಿಗಳ ಹೇಳಿಕೆಗಳನ್ನು ಕೇಳಿ ಅರ್ಜಿದಾರರ ಪರ ನ್ಯಾಯಾವಾದಿಗಳು ಪಾಲು ವಿಭಾಗದ ಪತ್ರಕ್ಕೆ ನಮಗೆ ಒಪ್ಪಿಗೆ ಇಲ್ಲವಾದ್ದರಿಂದ ಅದನ್ನು ತಿರಸ್ಕರಿಸಿ ಯಥಾಸ್ಥಿತಿಯಂತೆ ಪಹಣಿ ಉಳಿಸುವಂತೆ ಕೋರಿರುವ ಕಾರಣ ಈ ಕೆಳಗಿನಂತೆ ಆದೇಶ ಮಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಹೊಸಹಳ್ಳಿ ಗ್ರಾಮದ ಸನಂ 1145. 1187ಎ. ವಿಸ್ತೀರ್ಣ 6-53. 5-71. ಎಕ್ರೆ ಜಮೀನುಗಳ ಅರ್ಜಿದಾರರು ದಿನಾಂಕ 13-05-2010 ರ ಪಾಲು ವಿಭಾಗದ ಪತ್ರವು ತಮಗೆ ಒಪ್ಪಿಗೆ ಇಲ್ಲವಾದ್ದರಿಂದ ಅದನ್ನು ತಿರಸ್ಕರಿಸಿ ಯಥಾಸ್ಥಿತಿಯಂತೆ ಪಹಣಿ ಉಳಿಸುವಂತೆ ಕೋರಿರುವ ಕಾರಣ ವಿವಾದಿತ ಸ್ವತ್ತಿನ ಪಾಲು ವಿಭಾಗಕ್ಕೆ ಸಂಬಂದಿಸಿದಂತೆ ಅರ್ಜಿದಾರರು ಮತ್ತು ತಕರಾರರುದಾರರು ಸಿವಿಲ್ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ ಪರಿಹಾರ ಕಂಡು ಕೊಳ್ಳುವಂತೆ ಸೂಚಿಸುತ್ತಾ ಪಹಣಿಯನ್ನು ಯಥಾಸ್ಥಿತಿಯಂತೆ ಮುಂದುವರೆಸಲು ಆದೇಶಿಸಿ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಅದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 19-09-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಹೊಸಹಳ್ಳಿ
ಹೊಸಹಳ್ಳಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಪರಸಪ್ಪ ತಂದೆ [illegible] ಹಾಗೂ ಇತರರು ಹೊಸಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಟಿ.ಪರಸಪ್ಪ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಮಾರಪ್ಪ ತಂದೆ ಕೆಂಚಪ್ಪ ಉರುಫ್ ಎಕರಪ್ಪ ಹೊಸಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.